ಕರ್ನಾಟಕ ಸರ್ಕಾರ

ತಾಂತ್ರಿಕ ಶಿಕ್ಷಣ ನಿರ್ದೇಶನಾಲಯ

ರಾಷ್ಟ್ರೀಯ ಸೇವಾ ಯೋಜನೆ

ಸಂಖ್ಯೆ: ಡಿಟಿಇ/ಎನ್‌ಎಸ್‌ಎಸ್/04/ಐಡಿಪಿ/2017-18 23

ಸಂಯೋಜನಾಧಿಕಾರಿಯವರ ಕಛೇರಿ,
ಅರಮನೆ ರಸ್ತೆ ಬೆಂಗಳೂರು-01
ದಿನಾಂಕ: 05-08-2017

**ಸುತ್ತೋಲೆ**

ವಿಷಯ: ರಾಜ್ಯ ಮಟ್ಟದ ರಾಷ್ಟ್ರೀಯ ಸೇವಾ ಯುವಜನೋತ್ಸವ ಶಿಬಿರಕ್ಕೆ ಸ್ವಯಂ ಸೇವಕ/ಸೇವಕಿ ಯವರನ್ನು ನಿಯೋಜನೆ ಬಗ್ಗೆ.

ಉಲ್ಲೇಖ: 1) ರಾಜ್ಯ ಸಂಪರ್ಕಾಧಿಕಾರಿಯವರ ಪತ್ರ ಸಂಖ್ಯೆಯುಸೇಇ/ರಾಸೇಯೋ//2017-18/165 ದಿನಾಂಕ: 03.08.2017

2) ಕೇಂದ್ರ ಸರ್ಕಾರದ ಪತ್ರ ಸಂಖ್ಯೆ F.22/NSS/SYF/2017-18/678-712 Date:04-08-2017

*****

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ (1) ಮತ್ತು (2) ಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಸೇವಾ ಯೋಜನಾಕೋಶದ ಆಶ್ರಯದಲ್ಲಿ ಜಿಲ್ಲಾ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಡುಪಿ ಜಿಲ್ಲೆ ಹಾಗೂ ಡಾ.ಜಿ.ಶಂಕರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಉಡುಪಿ ಇವರ ಸಂಯುಕ್ತ ಆಶ್ರಯದಲ್ಲಿ 2016-17ನೇ ಸಾಲಿನ ಎರಡನೇ ರಾಜ್ಯ ಮಟ್ಟದ ರಾಷ್ಟ್ರೀಯ ಸೇವಾ ಯುವಜನೋತ್ಸವವನ್ನು ದಿನಾಂಕ 18-08-2017 ರಿಂದ 22-08-2017ರವರೆಗೆ ಮಹಾತ್ಮಗಾಂಧಿ, ಕ್ರೀಡಾಂಗಣ, ಅಜ್ಜರಕಾಡು ಉಡುಪಿ ಇಲ್ಲಿ ಏರ್ಪಡಿಸಿರುತ್ತಾರೆ.

ಸದರಿ ಉತ್ಸವದಲ್ಲಿ ರಾಷ್ಟ್ರೀಯ ಸೇವಾ ಯೋಜನೆಯ ಧ್ಯೇಯಗಳಿಗನುಸಾರವಾಗಿ ವಿವಿಧ ಕಾರ್ಯಕ್ರಮಗಳು ಮತ್ತು ಸ್ಪರ್ಧೆಗಳನ್ನು ಆಯೋಜಿಸಿರುತ್ತಾರೆ ಈ ಯುವಜನೋತ್ಸವಕ್ಕೆ ಕೆಳಕಂಡ ಎನ್.ಎಸ್.ಎಸ್ ಸ್ವಯಂ ಸೇವಕ/ಕೀಯರು ಭಾಗವಹಿಸಲು ಸೂಚಿಸಲಾಗಿದೆ. ಕ್ರ.ಸಂ 02 ಮತ್ತು 03 ರ ಸ್ವಯಂ ಸೇವಕ/ಸೇವಕಿಯರು ಸರ್ಕಾರಿ ಪಾಲಿಟೆಕ್ನಿಕ್ ಉಡುಪಿ ಇಲ್ಲಿನ ಕಾರ್ಯಕ್ರಮಾಧಿಕಾರಿಯವರ ನೇತೃತ್ವದಲ್ಲಿ ಹಾಜರಾಗುವುದು.

| ಕ್ರ.ಸಂ | ಪಾಲಿಟೆಕ್ನಿಕ್ ಹೆಸರು | ಸ್ವಯಂ ಸೇವಕ/ ಸೇವಕಿ | ಕಾರ್ಯಕ್ರಮಾಧಿಕಾರಿ |
|---|---|---|---|
| 01 | ಸರ್ಕಾರಿ ಪಾಲಿಟೆಕ್ನಿಕ್, ಉಡುಪಿ | 08 | 01 |
| 02 | ಸರ್ಕಾರಿ ಪಾಲಿಟೆಕ್ನಿಕ್ , ಕಾರ್ಕಳ | 04 | - |
| 03 | ಡಾ. ಟಿ.ಎಂ.ಎ .ಪೈ ಪಾಲಿಟೆಕ್ನಿಕ್, ಮಣಿಪಾಲ್ | 04 | - |

ಈ ಉತ್ಸವವು ದಿನಾಂಕ 18-08-2017 ರಂದು ಬೆಳಿಗ್ಗೆ 10-00 ಗಂಟೆಗೆ ಡಾ.ರೋಶನ್ ಶೆಟ್ಟಿ, ಸಹಾಯಕ ನಿರ್ದೇಶಕರು, ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಉಡುಪಿ ಜಿಲ್ಲೆ ಇವರಲ್ಲಿ ವರದಿ ಮಾಡಿಕೊಳ್ಳುವುದು.

**ಶಿಬಿರಾರ್ಥಿಗಳು ಬರುವಾಗ ಈ ಕೆಳಗಿನ ವಸ್ತುಗಳನ್ನು ತೆಗೆದುಕೊಂಡು ಬರುವುದು.**

1. ಉತ್ಸವಕ್ಕೆ ನಿಯೋಜಿಸಿದ ಬಗ್ಗೆ ಸಂಯೋಜನಾಧಿಕಾರಿ/ಪ್ರಾಂಶುಪಾಲರ ಪತ್ರ.
2. ಉತ್ಸವದ 'ಅವಧಿಗೆ ಬೇಕಾದ ಬಟ್ಟೆ, ಹೊದಿಕೆ, ಊಟದತಟ್ಟೆ, ಲೋಟ
3. ಕಾಲೇಜಿನ ಗುರುತು ಚೀಟಿ (Identity Card) ಮತ್ತು ಇಂಡೆಂಮ್ನಿಟಿ ನಮೂನೆ
4. ಕೀ ಇರುವ ಸೂಟ್‌ಕೇಸ್ ಮತ್ತು ಟಾರ್ಚ್, ಔಷಧಿಗಳು ಏನಾದರು ಇದ್ದರೆ.
5. ಬೆಲೆಬಾಳುವ ವಸ್ತು, ಚಿನ್ನಾಭರಣ ಇತ್ಯಾದಿ ತೆಗೆದುಕೊಂಡು ಬರಬಾರದು. ಕಳೆದುಕೊಂಡಲ್ಲಿ ಶಿಬಿರದ ವ್ಯವಸ್ಥಾಪಕರು ಜವಾಬ್ದಾರರಲ್ಲ.
6. ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಬೇಕಾದ ಉಡುಗೆ ತೊಡುಗೆ.
7. ವಸ್ತು ಪ್ರದರ್ಶನಕ್ಕೆ ಬೇಕಾದರಾ.ಸೇ.ಯೋಜನೆಗೆ ಸಂಬಂಧಿಸಿದ ಫೋಟೋ, ಪೋಸ್ಟರ್, ಬ್ಯಾನರ್, ಪ್ರಶಸ್ತಿಗಳು, ಪತ್ರಿಕಾ ವರದಿ ಹಾಗೂ ಸ್ಥಳೀಯ ಸಂಸ್ಕೃತಿ ಪ್ರತಿಪಾದಿಸುವ ಪರಿಕರಗಳು.
8. ಉತ್ಸವದ ಮೊದಲನೇ ದಿನ ಸಾಂಸ್ಕೃತಿಕ ಮೆರವಣಿಗೆ. ಆಯಾ ಜಿಲ್ಲೆಯ ಸಾಂಪ್ರದಾಯಿಕ ಉಡುಗೆತೊಡುಗೆ (Traditional Dress)ಗಳನ್ನು ತರಬೇಕು.
9. ಉತ್ಸವಕ್ಕೆ ಹಾಜರಾಗುವ ಬಗ್ಗೆ ಪಾಲಕರಒಪ್ಪಿಗೆ ಪತ್ರ.

ಹೆಚ್ಚಿನ ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಲಾಗಿದೆ. ಪ್ರವೇಶ ಪತ್ರಗಳನ್ನು ದಿನಾಂಕ 15.08.2017ರೊಳಗೆ ಸಹಾಯಕ ನಿರ್ದೇಶಕರು, ಯುವಸಬಲೀಕರಣ ಮತ್ತುಕ್ರೀಡಾ ಇಲಾಖೆ, ಉಡುಪಿ ಜಿಲ್ಲೆ ಇವರಿಗೆ ಕಳುಹಿಸುವುದು ಹೆಚ್ಚಿನ ಮಾಹಿತಿಗಾಗಿ ಈ ಕೆಳಗಿನವರನ್ನು ಸಂಪರ್ಕಿಸಬಹುದು:

01. ಡಾ॥ ಗಣನಾಥ ಶೆಟ್ಟಿ, ರಜ್ಯಎನ್.ಎಸ್.ಎಸ್. ಅಧಿಕಾರಿ, ಮೊಬೈಲ್ 9964583433

02. ಡಾ॥ ರೋಶನ್ ಶೆಟ್ಟಿ, ಸಹಾಯಕ ನಿರ್ದೇಶಕರು, ಯುವಸಬಲೀಕರಣ ಮತ್ತುಕ್ರೀಡಾ ಇಲಾಖೆ, ಉಡುಪಿ ಜಿಲ್ಲೆ ಮೊಬೈಲ್ 94808 86467

ನಿರ್ದೇಶಕರು,

ಪ್ರತಿಗಳು:

1. ರಾಜ್ಯ ಸಂಪರ್ಕಾಧಿಕಾರಿ ರಾಷ್ಟ್ರೀಯ ಸೇವಾ ಯೋಜನೆ ಯುವಜನ ಸೇವಾ ಇಲಾಖೆ, ಬಹುಮಹಡಿ ಕಟ್ಟಡ, ಬೆಂಗಳೂರು.
2. ನಿರ್ದೇಶಕರು ಎನ್.ಎಸ್.ಎಸ್. ಪ್ರಾದೇಶಿಕ ಕೇಂದ್ರ, ಬಸವನಗುಡಿ, ಬೆಂಗಳೂರು-04.
3. ಸಂಬಂಧಪಟ್ಟ ಪಾಲಿಟೆಕ್ನಿಕ್ ಪ್ರಾಚಾರ್ಯರಿಗಳಿಗೆ-ಸೂಕ್ತ ಕ್ರಮಕ್ಕಾಗಿ.
4. ಇ-ಆಡಳಿತ ಅಂತರ್‌ಜಾಲತಾಣದಲ್ಲಿ ಪ್ರಕಟಿಸಲು
5. ಕಛೇರಿ ಕಡತಕ್ಕೆ.

**ಕರ್ನಾಟಕ ಸರ್ಕಾರ**

ರಾಷ್ಟ್ರೀಯ ಸೇವಾ ಯೋಜನಾ ಕೋಶ,

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

**ಜಿಲ್ಲಾ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಡುಪಿ ಜಿಲ್ಲೆ**

**ಹಾಗೂ**

**ಡಾ.ಜಿ.ಶಂಕರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಉಡುಪಿ**

**ರಾಜ್ಯ ಮಟ್ಟದ ರಾಷ್ಟ್ರೀಯ ಸೇವಾ ಯುವಜನೋತ್ಸವ 2017–18**

**ಕಾರ್ಯಕ್ರಮ ವಿವರಗಳು**

**ಪ್ರತಿದಿನದ ಕಾರ್ಯಕ್ರಮಗಳು:**

| | | |
|---|---|---|
| ಬೆಳಿಗ್ಗೆ | 6.00 ರಿಂದ 6.30 | ಧ್ವಜಾರೋಹಣ |
| | 6.30 ರಿಂದ 7.30 | ಯೋಗ/ಚಿಂತನ |
| | 7.30 ರಿಂದ 8.30 | ಉಪಾಹಾರ |
| | 8.30 ರಿಂದ 12.30 | ಶ್ರಮದಾನ |
| ಮಧ್ಯಾಹ್ನ | 2.30 ರಿಂದ 3.30 | ವಿಶೇಷ ಉಪನ್ಯಾಸ |
| | 3.30 ರಿಂದ 5.30 | ಸಾಹಿತ್ಯಿಕ ಸಾಂಸ್ಕೃತಿಕ ಸ್ಪರ್ಧೆಗಳು |
| ಸಂಜೆ | 6.30 ರಿಂದ 8.30 | ಸಾಂಸ್ಕೃತಿಕ ಸ್ಪರ್ಧೆ/ಕಾರ್ಯಕ್ರಮಗಳು |
| | 8.30 ರಿಂದ 9.00 | ಮೌಲ್ಯಮಾಪನ |

**ಸಾಮಾನ್ಯ ನಿಯಮಗಳು:**

1. ಒಂದು ವಿಶ್ವವಿದ್ಯಾನಿಲಯ/ನಿರ್ದೇಶನಾಲಯದಿಂದ 8 ಸ್ವಯಂಸೇವಕರು ಮತ್ತು 8 ಸ್ವಯಂಸೇವಕಿಯರ ತಂಡ ಭಾಗವಹಿಸಬಹುದು. ಒಂದೇ ಕಾಲೇಜಿನ ತಂಡ ಭಾಗವಹಿಸುವಂತಿಲ್ಲ. ಒಂದು ಕಾಲೇಜಿನಿಂದ ಗರಿಷ್ಠ ಇಬ್ಬರನ್ನು ಮಾತ್ರ ನಿಯೋಜಿಸುವುದು. ಒಬ್ಬರು ಯೋಜನಾಧಿಕಾರಿ ತಂಡದ ಮುಖ್ಯಸ್ಥರಾಗಿ ಕಡ್ಡಾಯವಾಗಿ ಕಾರ್ಯ ನಿರ್ವಹಿಸಬೇಕು.
2. ಸ್ವಯಂಸೇವಕ/ಕಿಯರು ಎಲ್ಲಾ ಕಾರ್ಯಕ್ರಮಗಳಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು. ಸಮಯ ಪಾಲನೆ. ಶಿಸ್ತು ಮತ್ತು ಬದ್ಧತೆಗಳನ್ನು ನಿರೀಕ್ಷಿಸಲಾಗುವುದು.
3. ತಂಡವು ದಿನಾಂಕ 18–08–2017ರಂದು ಬೆಳಿಗ್ಗೆ 10–00 ಗಂಟೆಯೊಳಗೆ ವರದಿ ಮಾಡಿಕೊಳ್ಳುವುದು. ಅದೇ ದಿನ ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸುವ ಸ್ವಯಂಸೇವಕರ ಪಟ್ಟಿಯನ್ನು ನೀಡಬೇಕು.
4. ಅತ್ಯುತ್ತಮ ಶ್ರಮದಾನ, ಶಿಸ್ತು, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಗರಿಷ್ಠ 10 ಅಂಕಗಳನ್ನು ನೀಡಲಾಗುವುದು. ಸಮಗ್ರ ಪ್ರಶಸ್ತಿಗೆ ಪರಿಗಣಿಸಲಾಗುವುದು.
5. ಸ್ಪರ್ಧೆಯಲ್ಲಿ ಪ್ರಥಮ/ದ್ವಿತೀಯ/ತೃತೀಯ ಬಹುಮಾನಗಳಿದ್ದು, ಪ್ರಥಮ ಬಹುಮಾನ 5 ಅಂಕಗಳು, ದ್ವಿತೀಯ 3 ಅಂಕಗಳು, ತೃತೀಯ 2 ಅಂಕಗಳನ್ನು ನೀಡಲಾಗುವುದು. ಸಮಗ್ರ ಪ್ರಶಸ್ತಿಗೆ ಈ ಅಂಕಗಳು ಮಾನದಂಡಗಳಾಗುವುದು. ಕ್ರ.ಸಂ.4 ಮತ್ತು 5ರ ವಿವರಣೆಯ ಆಧಾರದ ಮೇಲೆ ಸಮಗ್ರ ಪ್ರಶಸ್ತಿ ಹಾಗೂ ರನ್ನರ್ಸ್ ಪ್ರಶಸ್ತಿ ನೀಡಲಾಗುವುದು.
6. ವಸತಿ, ಊಟೋಪಚಾರ ವ್ಯವಸ್ಥೆ ಮಾಡಲಾಗುವುದು. ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಸಾಮಾನ್ಯ ದರ್ಜೆಯ ಬಸ್ಸಿನ ಇಲ್ಲವೇ ರೈಲು ಸ್ಲೀಪರ್ ಕ್ಲಾಸ್‌ನ ವೆಚ್ಚವನ್ನು ನೀಡಲಾಗುವುದು. ಭಾಗವಹಿಸುವ ಸ್ವಯಂಸೇವಕರು ತಮ್ಮ ಬ್ಯಾಂಕ್ ಪಾಸ್ ಬುಕ್ಕಿನ ಮೊದಲ ಪುಟದ ಪ್ರತಿಯನ್ನು ಒದಗಿಸುವುದು.
7. ರಾ.ಸೇ.ಯುವಜನೋತ್ಸವದ ಎಲ್ಲಾ ನಿಯಮಗಳನ್ನು ಕಡ್ಡಾಯವಾಗಿ ಪಾಲಿಸಬೇಕು.
8. ಸಂಘಟಕರ ತೀರ್ಮಾನವೇ ಅಂತಿಮವಾದುದು.

....... 2

## ಸ್ಪರ್ಧೆಗಳ ನಿಯಮಗಳು

**1. ಸುಗಮ ಸಂಗೀತ (ವೈಯಕ್ತಿಕ):**

ಅ) ಭಾವಗೀತೆ, ಜನಪದಗೀತೆ, ದೇಶಭಕ್ತಿ ಗೀತೆಗಳನ್ನು ಹಾಡಬಹುದು.

ಆ) ಒಬ್ಬ ಸ್ಪರ್ಧಿಗೆ ಒಂದು ಹಾಡು ಹಾಡಲು ಅವಕಾಶ. ಗರಿಷ್ಟ 4 ನಿಮಿಷಗಳನ್ನು ನೀಡಲಾಗುವುದು.

ಇ) ಒಂದು ವಿಶ್ವವಿದ್ಯಾನಿಲಯ/ನಿರ್ದೇಶನಾಲಯದಿಂದ ಒಬ್ಬ ಸ್ಪರ್ಧಿ ಮಾತ್ರ ಭಾಗವಹಿಸಬಹುದು.

**2. ಸಂಗೀತ ಸ್ಪರ್ಧೆ (ಗುಂಪು):**

ಅ) ಭಾವಗೀತೆ, ಜನಪದಗೀತೆ, ದೇಶಭಕ್ತಿ ಗೀತೆ ಯಾವುದಾದರೂ ಒಂದು ಪ್ರಕಾರವನ್ನು ಆಯ್ದುಕೊಳ್ಳುವುದು.

ಆ) ಒಂದು ತಂಡವು ಒಂದು ಹಾಡನ್ನು ಹಾಡಬಹುದು. ಗರಿಷ್ಠ ಸಮಯ ಐದು ನಿಮಿಷಗಳು.

ಇ) ಗರಿಷ್ಠ 6 ಜನರು ಭಾಗವಹಿಸಬಹುದು. ಹಿನ್ನೆಲೆ ಸಂಗೀತ ನೀಡುವುದಕ್ಕೆ ಅವಕಾಶವಿದೆ. ಹಿನ್ನೆಲೆ ಸಂಗೀತವನ್ನು ಸ್ಪರ್ಧಿಗಳಲ್ಲದ ಸ್ವಯಂಸೇವಕರೂ ನೀಡಬಹುದು.

ಈ) ಒಂದು ವಿಶ್ವವಿದ್ಯಾನಿಲಯ/ನಿರ್ದೇಶನಾಲಯದಿಂದ ಒಂದು ತಂಡವು ಭಾಗವಹಿಸಬಹುದು.

**3. ಪ್ರಹಸನ ಸ್ಪರ್ಧೆ:**

ಅ) ಒಂದು ವಿಶ್ವವಿದ್ಯಾನಿಲಯ/ನಿರ್ದೇಶನಾಲಯದಿಂದ ಒಂದು ತಂಡ ಭಾಗವಹಿಸಬಹುದು. ತಂಡದ ಗರಿಷ್ಠ ಸಂಖ್ಯೆ. ಏಳು. ಅವಧಿ 8 ನಿಮಿಷಗಳು.

ಆ) ಪ್ರಹಸನವು ಸಾಮಾಜಿಕ ಸಮಸ್ಯೆಯನ್ನು ಪ್ರತಿನಿಧಿಸುವ ವಸ್ತುವನ್ನು ಒಳಗೊಂಡಿರಬೇಕು.

ಇ) ವಸ್ತು, ಅಭಿನಯ, ರಂಗಪರಿಕರಗಳನ್ನು ಪರಿಗಣಿಸಲಾಗುವುದು.

**4. ರಸಪ್ರಶ್ನೆ:**

ಅ) ಒಂದು ವಿಶ್ವವಿದ್ಯಾನಿಲಯ/ನಿರ್ದೇಶನಾಲಯದಿಂದ ಇಬ್ಬರು ಸ್ವಯಂಸೇವಕರು ಭಾಗವಹಿಸಬಹುದು.

ಆ) ಎನ್.ಎಸ್.ಎಸ್. ಮತ್ತು ಚರಿತ್ರೆ, ವಿಜ್ಞಾನ, ಕಲೆ,ಸಾಹಿತ್ಯ ಮತ್ತು ಸಮಕಾಲೀನ ವಿಚಾರಗಳ ಬಗ್ಗೆ ಪ್ರಶ್ನೆಗಳಿರುತ್ತದೆ.

**5. ಚರ್ಚಾ ಸ್ಪರ್ಧೆ:**

ಅ) ಒಂದು ವಿಶ್ವವಿದ್ಯಾನಿಲಯ/ನಿರ್ದೇಶನಾಲಯದಿಂದ ಇಬ್ಬರು ಸ್ವಯಂಸೇವಕರು ಭಾಗವಹಿಸಬಹುದು.

ಆ) ಒಬ್ಬರು ವಿಷಯದ ಪರ/ಒಬ್ಬರು ವಿಷಯದ ವಿರೋಧ ಮಾತನಾಡಬಹುದು.

ಇ) ವಿಷಯವನ್ನು ಸ್ಪರ್ಧೆಯ ಹಿಂದಿನ ದಿನ ನೀಡಲಾಗುವುದು. ಅವಧಿ ನಾಲ್ಕು ನಿಮಿಷಗಳು.

**6. ಚಿತ್ರಕಲಾ ಸ್ಪರ್ಧೆ:**

ಅ) ಒಂದು ವಿಶ್ವವಿದ್ಯಾನಿಲಯ/ನಿರ್ದೇಶನಾಲಯದಿಂದ ಒಬ್ಬ ಸ್ವಯಂಸೇವಕ ಭಾಗವಹಿಸಬಹುದು.

ಆ) ಒಂದು ಗಂಟೆ ಸಮಯ ನೀಡಲಾಗುವುದು.

ಇ) ಡ್ರಾಯಿಂಗ್ ಪರಿಕರಗಳನ್ನು ಸ್ಪರ್ಧಿಗಳೇ ತರಬೇಕು. ಡ್ರಾಯಿಂಗ್ ಪೇಪರ್ ನೀಡಲಾಗುವುದು.

ಈ) ವಿಷಯವನ್ನು ಸ್ಪರ್ಧೆಯ ಹಿಂದಿನ ದಿನ ನೀಡಲಾಗುವುದು.

........ 3

**7. ಪ್ರಬಂಧ ಸ್ಪರ್ಧೆ:**

ಅ) ಒಂದು ವಿಶ್ವವಿದ್ಯಾನಿಲಯ/ನಿರ್ದೇಶನಾಲಯದಿಂದ ಒಬ್ಬ ಸ್ವಯಂಸೇವಕ ಭಾಗವಹಿಸಬಹುದು.

ಆ) ಪ್ರಬಂಧವು ಪುಲ್‌ಸ್ಕೇಪ್ ಹಾಳೆಯಲ್ಲಿ 4 ಪುಟ ಮೀರಬಾರದು. ಒಂದು ಗಂಟೆಯ ಅವಧಿ ನೀಡಲಾಗುವುದು.

ಇ) ವಿಷಯವನ್ನು ಸ್ಪರ್ಧೆಯ ಹಿಂದಿನ ದಿನ ನೀಡಲಾಗುವುದು.

**8. ನೃತ್ಯ ಸ್ಪರ್ಧೆ (ವೈಯಕ್ತಿಕ):**

ಅ) ಒಂದು ವಿಶ್ವವಿದ್ಯಾನಿಲಯ/ನಿರ್ದೇಶನಾಲಯದಿಂದ ಒಬ್ಬ ಸ್ವಯಂಸೇವಕ ಭಾಗವಹಿಸಬಹುದು.

ಆ) ನೃತ್ಯವು ಶಾಸ್ತ್ರೀಯ, ಜಾನಪದ ಯಾವುದೇ ಪ್ರಕಾರದ್ದಾಗಿರಬಹುದು. ಆದರೆ ಚಲನಚಿತ್ರ ನೃತ್ಯಗಳಿಗೆ ಅವಕಾಶವಿಲ್ಲ. ಅವಧಿ ಐದು ನಿಮಿಷಗಳು.

ಇ) ಹಿನ್ನೆಲೆ ಗಾಯನಕ್ಕೆ ಕ್ಯಾಸೆಟ್ ಬಳಸಬಹುದು. ಸ್ವಯಂಸೇವಕರೇ ಹಿನ್ನೆಲೆಯನ್ನು ನೀಡಿದಲ್ಲಿ ವಿಶೇಷವಾಗಿ ಪರಿಗಣಿಸಲಾಗುವುದು.

**9. ವಸ್ತುಪ್ರದರ್ಶನ ಸ್ಪರ್ಧೆ:**

ಅ) ವಿಶ್ವವಿದ್ಯಾನಿಲಯ/ನಿರ್ದೇಶನಾಲಯಗಳು ತಮ್ಮ ಎನ್.ಎಸ್.ಎಸ್. ಚಟುವಟಿಕೆಗಳ ಭಾವಚಿತ್ರ, ದಾಖಲೆ, ಪ್ರಕಟಣೆ, ಪ್ರಶಸ್ತಿ ಇತ್ಯಾದಿ, ಚಟುವಟಿಕೆಗಳಿಗೆ ಸಂಬಂಧಿಸಿದ ವಸ್ತುಗಳನ್ನು ಪ್ರದರ್ಶಿಸಬಹುದು.

ಆ) ಸ್ಥಳೀಯ ಸಂಸ್ಕೃತಿಗೆ ಸಂಬಂಧಿಸಿದ ವಸ್ತುಗಳನ್ನು ಪ್ರದರ್ಶಿಸಬಹುದು.

ಇ) ಪ್ರದರ್ಶನದ ಒಟ್ಟು ಸ್ವರೂಪವನ್ನು ಗಮನಿಸಿ ಮೌಲ್ಯಮಾಪನ ಮಾಡಲಾಗುವುದು.

**10. ಸಾಂಸ್ಕೃತಿಕ–ಭಾವೈಕ್ಯತಾ ಮೆರವಣಿಗೆ:**

ಅ) ವಿಶ್ವವಿದ್ಯಾನಿಲಯ/ನಿರ್ದೇಶನಾಲಯಗಳು ಸಾಂಸ್ಕೃತಿಕ ಭಾವೈಕ್ಯತಾ ಮೆರವಣಿಗೆಯಲ್ಲಿ ಕಡ್ಡಾಯವಾಗಿ ಭಾಗವಹಿಸಬೇಕು.

ಆ) ಸ್ಥಳೀಯ ಸಂಸ್ಕೃತಿಗೆ ಸಂಬಂಧಿಸಿದ ಉಡುಪು ಧರಿಸಬಹುದು. ವೇಷ–ಭೂಷಣಗಳಿಗೆ ಅವಕಾಶವಿದೆ. ಭಾವೈಕ್ಯತೆ ಹಾಗೂ ಸಾಮಾಜಿಕ ಸಮಸ್ಯೆಗಳಿಗೆ ಸಂಬಂಧಿಸಿದ ಬ್ಯಾನರ್/ಪ್ಲಕಾರ್ಡ್‌ಗಳನ್ನು ಬಳಸಬಹುದು.

ಇ) ತಮ್ಮ ವಿಶ್ವವಿದ್ಯಾನಿಲಯ/ನಿರ್ದೇಶನಾಲಯದ ಬ್ಯಾನರ್‌ಗಳನ್ನು ಪ್ರದರ್ಶಿಸಬೇಕು.

***

**ಕರ್ನಾಟಕ ಸರ್ಕಾರ**

ರಾಷ್ಟ್ರೀಯ ಸೇವಾ ಯೋಜನಾ ಕೋಶ,

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಜಿಲ್ಲಾ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ, ಉಡುಪಿ ಜಿಲ್ಲೆ

ಹಾಗೂ

ಡಾ.ಜಿ.ಶಂಕರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಉಡುಪಿ

2017–18ನೇ ಸಾಲಿನ ರಾಜ್ಯ ಮಟ್ಟದ ರಾಷ್ಟ್ರೀಯ ಸೇವಾ ಯುವಜನೋತ್ಸವದ ಪ್ರವೇಶ ಪತ್ರ

| | | |
|---|---|---|
| ವಿಶ್ವ ವಿದ್ಯಾನಿಲಯದ ಹೆಸರು | | |
| ಸಂಯೋಜನಾಧಿಕಾರಿಗಳ ಹೆಸರು | | |
| ದೂರವಾಣಿ ಸಂಖ್ಯೆ | ಸ್ಥಿರ | ಮೊಬೈಲ್: |
| ಭಾಗವಹಿಸುವ ಯೋಜನಾಧಿಕಾರಿ ಹೆಸರು: | | ಮೊಬೈಲ್: |
| ವಿಳಾಸ: | | |
| ದೂರವಾಣಿ ಸಂಖ್ಯೆ | | |
| **ಭಾಗವಹಿಸುವ ರಾಸೇಯೋಜನಾ ವಿದ್ಯಾರ್ಥಿಗಳ ವಿವರ** | | |

| ಕ್ರ.ಸಂ. | ಹೆಸರು | ತರಗತಿ | ಕಾಲೇಜು |
|---|---|---|---|
| 01. | | | |
| 02. | | | |
| 03. | | | |
| 04. | | | |
| 05. | | | |
| 06. | | | |
| 07. | | | |
| 08. | | | |
| 09. | | | |
| 10. | | | |
| 11. | | | |
| 12. | | | |
| 13 | | | |
| 14. | | | |
| 15. | | | |
| 16 | | | |

ಸಂಯೋಜನಾಧಿಕಾರಿಗಳ ಸಹಿ

(ಭಾಗವಹಿಸುವ ವಿದ್ಯಾರ್ಥಿಗಳು ಕಾಲೇಜಿನ ಗುರುತಿನ ಚೀಟಿ ಕಡ್ಡಾಯವಾಗಿ ತರಬೇಕು)

**ಕರ್ನಾಟಕ ಸರ್ಕಾರ**
ರಾಷ್ಟ್ರೀಯ ಸೇವಾ ಯೋಜನಾ ಕೋಶ,
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಜಿಲ್ಲಾ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಡುಪಿ ಜಿಲ್ಲೆ
ಹಾಗೂ
ಡಾ.ಜಿ.ಶಂಕರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಉಡುಪಿ

**2017–18ನೇ ಸಾಲಿನ ರಾಜ್ಯ ಮಟ್ಟದ ರಾಷ್ಟ್ರೀಯ ಸೇವಾ ಯುವಜನೋತ್ಸವ**

ದಿನಾಂಕ 18–08–2017 ರಿಂದ 22–08–2017ರ ವರೆಗೆ
ಸ್ಥಳ: ಮಹಾತ್ಮ ಗಾಂಧಿ ಕ್ರೀಡಾಂಗಣ, ಅಜ್ಜರಕಾಡು **ಉಡುಪಿ**

**ವಿಶ್ವವಿದ್ಯಾನಿಲಯ/ನಿರ್ದೇಶನಾಲಯದ ಹೆಸರು:**

ಸ್ಪರ್ಧೆಯಲ್ಲಿ ಭಾಗವಹಿಸುವವರ ಪಟ್ಟಿ.

| **ಸ್ಪರ್ಧೆ** | **ಭಾಗವಹಿಸುವವರ ಹೆಸರು** |
|---|---|
| **1. ಸುಗಮ ಸಂಗೀತ (ವೈಯಕ್ತಿಕ)** | |
| **2. ಸಂಗೀತ ಸ್ಪರ್ಧೆ (ಗುಂಪು)** | |
| **3. ಪ್ರಹಸನ ಸ್ಪರ್ಧೆ** | |
| **4. ರಸಪ್ರಶ್ನೆ** | 1.<br>2. |
| **5. ಚರ್ಚಾ ಸ್ಪರ್ಧೆ** | 1.<br>2. |
| **6. ಚಿತ್ರಕಲಾ ಸ್ಪರ್ಧೆ** | |
| **7. ಪ್ರಬಂಧ ಸ್ಪರ್ಧೆ** | |
| **8. ನೃತ್ಯ ಸ್ಪರ್ಧೆ (ವೈಯಕ್ತಿಕ)** | |

ತಂಡದ ಮುಖ್ಯಸ್ಥರ ಸಹಿ

**ಕರ್ನಾಟಕ ಸರ್ಕಾರ**

ರಾಷ್ಟ್ರೀಯ ಸೇವಾ ಯೋಜನಾ ಕೋಶ,

ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ.

ಜಿಲ್ಲಾ ಯುವಸಬಲೀಕರಣ ಮತ್ತು ಕ್ರೀಡಾ ಇಲಾಖೆ ಉಡುಪಿ ಜಿಲ್ಲೆ

ಹಾಗೂ

ಡಾ.ಜಿ.ಶಂಕರ ಸರ್ಕಾರಿ ಮಹಿಳಾ ಪ್ರಥಮ ದರ್ಜೆ ಕಾಲೇಜು ಉಡುಪಿ

ದಿನಾಂಕ 18–08–2017 ರಿಂದ 22–08–2017ರ ವರೆಗೆ

ಸ್ಥಳ: ಮಹಾತ್ಮ ಗಾಂಧಿ ಕ್ರೀಡಾಂಗಣ, ಅಜ್ಜರಕಾಡು **ಉಡುಪಿ**

**ಕಾರ್ಯಕ್ರಮ ವಿವರಗಳು:**

**ದಿನಾಂಕ: 22–08–2017**

| | | |
|---|---|---|
| ಮಧ್ಯಾಹ್ನ | 1.00 ಗಂಟೆಯವರೆಗೆ | – ದಾಖಲಾತಿ |
| ಸಂಜೆ | 4.00 – 5.00 | – ಸಾಂಸ್ಕೃತಿಕ ಮೆರವಣಿಗೆ |
| | 5.30 | – ಉದ್ಘಾಟನೆ |
| | 7.00 ರಿಂದ 8.00 | – ಸಭೆ |
| | 8.00 ರಿಂದ 9.00 | – ಊಟ – ಶುಭರಾತ್ರಿ |
| **ದೈನಂದಿನ ಕಾರ್ಯಕ್ರಮಗಳು** | | |
| **ಬೆಳಿಗ್ಗೆ** | 6.00 ರಿಂದ 6.30 | – ಧ್ವಜಾರೋಹಣ |
| | 6.30 ರಿಂದ 7.30 | – ಯೋಗ/ಚಿಂತನ |
| | 7.30 ರಿಂದ 8.30 | – ಉಪಾಹಾರ |
| | 8.30 ರಿಂದ 12.30 | – ಉದ್ಘಾಟನೆ (ಮೊದಲದಿನ)/ ಶ್ರಮದಾನ |
| ಮಧ್ಯಾಹ್ನ | 12.30 ರಿಂದ 2.30 | – ವಿರಾಮ, ಭೋಜನ |
| | 2.30 ರಿಂದ 3.30 | – ವಿಶೇಷ ಉಪನ್ಯಾಸ |
| | 3–30 ರಿಂದ 5–30 | – ಸಾಹಿತ್ಯಿಕ–ಸಾಂಸ್ಕೃತಿಕ ಸ್ಪರ್ಧೆಗಳು |
| ಸಂಜೆ | 6–30 ರಿಂದ 8–30 | – ಸಾಂಸ್ಕೃತಿಕ ಸ್ಪರ್ಧೆ/ಕಾರ್ಯಕ್ರಮಗಳು |
| | 8–30 ರಿಂದ 9–15 | – ಭೋಜನ |
| | 9–15 ರಿಂದ 10–00 | – ಮೌಲ್ಯಮಾಪನ |
| | 10–00 | – ಶುಭರಾತ್ರಿ |
| | | |

***